# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1167(1186) |
| ಮಾನ್ಯ ಸದಸ್ಯರ ಹೆಸರು | : | ಡಾ. ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18.03.2025 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಹಾನಗರ ಪಾಲಿಕೆ/ ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸರ್ಕಾರದ ಆದೇಶದಂತೆ ಆನ್‌ಲೈನ್ ನಲ್ಲಿ "ಬಿ" ಖಾತೆ ನೀಡಲು ಅರ್ಜಿ ಸಲ್ಲಿಸಿದವರ ದಾಖಲಾತಿ ಪರಿಶೀಲಿಸಲಾಗಿ ನೋಟರಿ ಪತ್ರ ಮಾತ್ರ ಇದ್ದು ರಿಜಿಸ್ಟರ್ ಪತ್ರ ಇಲ್ಲದೆ ಇರುವುದರಿಂದ "ಬಿ" ಖಾತೆ ಮಾಡಲು ಸಾಧ್ಯವಾಗುತ್ತಿಲ್ಲದಿರುವುದರ ಬಗ್ಗೆ ಸರ್ಕಾರದ ಕ್ರಮವೇನು: | ನೋಂದಾಯಿತ ದಾಖಲೆಗಳ ಆಧಾರದ ಮೇಲೆ ತಂತ್ರಾಂಶದಲ್ಲಿ ಖಾತಾ ಸೃಜಿಸಿ ನೀಡಲಾಗುತ್ತದೆ. ನೋಂದಾಯಿತವಲ್ಲದ ದಾಖಲೆಗಳನ್ನು ಮಾಲೀಕತ್ವ ಸಾಬೀತುಪಡಿಸಲು ಪೂರಕ ದಾಖಲೆ ಎಂದು ಪರಿಗಣಿಸುತ್ತಿಲ್ಲವಾದ್ದರಿಂದ ಖಾತಾ ನೀಡಲು ಪ್ರಸ್ತುತ ಅವಕಾಶವಿರುವುದಿಲ್ಲ. |
| (ಆ) | ಈ ಹಿಂದೆ ಪಂಚಾಯಿತಿಯಲ್ಲಿ ಖಾತೆ ಮಾಡಿ ಖಾತೆದಾರರಿಗೆ ಡಿಮ್ಯಾಂಡ್ ನಕಲು ನೀಡಿ ಡಿಮ್ಯಾಂಡ್ ರಿಜಿಸ್ಟರ್ ನಲ್ಲಿ ನಮೂದಿಸದೆ ಇರುವ ಅಂತಹ ಖಾತೆಗಳನ್ನು ಈಗ ನಗರಸಭೆ/ ಪುರಸಭೆ/ಪಟ್ಟಣ ಪಂಚಾಯಿತಿಗಳಿಗೆ ಹಸ್ತಾಂತರವಾದ ನಂತರ ಅಂತಹವುಗಳನ್ನು ನಮೂದಿಸಲು ಆದೇಶವಿಲ್ಲದ ಕಾರಣ ಖಾತೆ ಮಾಡಲು ಸಮಸ್ಯೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮವೇನು? | ಗ್ರಾಮ ಪಂಚಾಯತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತಿಸಿದಾಗ ಗ್ರಾಮ ಪಂಚಾಯತಿಗಳಿಂದ ವರ್ಗಾಯಿಸಲ್ಪಡಬಹುದಾದ ವಿಷಯಗಳು ಹಾಗೂ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು ದಿನಾಂಕ:16-11-2022 ರಲ್ಲಿ ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಯಿಂದ ಜಂಟಿ ಸುತ್ತೋಲೆ ಹೊರಡಿಸಲಾಗಿರುತ್ತದೆ. ಅದರಂತೆ ಗ್ರಾಮ ಪಂಚಾಯತಿ ಪ್ರಾರಂಭದ ಸಾಲಿನಿಂದ ಪರಿವರ್ತನೆಗೊಳ್ಳುವವರೆಗೆ ನಿರ್ವಹಿಸಿರುವ ನಮೂನೆ 9 ಮತ್ತು ನಮೂನೆ11 ಎ ಹಾಗೂ ನಮೂನೆ 11 ಬಿ ವಹಿಗಳನ್ನು ಹಸ್ತಾಂತರಿಸಬೇಕಾಗಿದ್ದು, ಹಸ್ತಾಂತರ ವಹಿಗಳಲ್ಲಿರುವ ಖಾತಾಗಳನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮುಂದುವರೆಸಲಾಗುವುದು. |

ಕಡತ ಸಂಖ್ಯೆ: ನಅಇ 78 ಜಿಇಎಲ್ 2025

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು